# ಬೆಳದಿಂಗಳಿಗು ಚಿಂತೆ ಹಚ್ಚಬೇಡ

ತುಟಿದೆರೆದು ಇದುಯೆಂದು ಹೇಳದೆಯೆ
ಇರುವುದೇ ಚಿಂತೆ ಎನುವಂತೆ
ನಗೆಯದರ ಕುದಿಯಲ್ಲಿ ಬೇಸುತಿರುವೆ
ತೆರೆಯದೆ ಮನಸು ತಂಗಾಳಿಗೆ.

ಹೆಜ್ಜೆ ಹಾಕುವ ನಿನ್ನ ಮೌನಕ್ಕೆ ಮಾತು
ಬರುವಷ್ಟು ದೂರ
ಬರದಿರಲಿ ತಿರುವುಗಳು ಹೊರಳಲು
ನಾನತ್ತ ನೀನಿತ್ತ

ಅರಳಿ ಪರಿಮಳಿಸಿದ ಮೊಗ್ಗೆ ಮರಳಿ
ಮೊಗ್ಗಾದುದುಂಟೇನು?
ಚಿಂತೆ ಮಗ್ಗದಲಿರಿಸಿ ಒಲವು ನಲಿವನು
ನೇಯುವುದು ಉಂಟೇನು?

ಎದೆದೆರೆಯದೆ ಸೌಂದರ್ಯ ಕಂಡೆ
ಎಂದವರು ಜಗದಲ್ಲೆ ಇಲ್ಲ
ತುಟಿದೆರೆದು ಇದುಯೆಂದು ಹೇಳು
ಬೆಳದಿಂಗಳಿಗು ಚಿಂತೆ ಹಚ್ಚಬೇಡ.

